VIJAYAKUMAR KANNUR
Digitally signed by VIJAYAKUMAR KANNUR
Date: 2025.07.19 10:33:43 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 18.07.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಜಿ ಎಸ್ ಪಿ ವಕೀಲರಿಂದ :**

ಹಣಮಪ್ಪ ತಂದೆ ಗಿರಿಯಪ್ಪನ ಕಣಬೂರ ಇವರಿಗೆ 3 ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು. ಅವರೇಂದರೆ ಪ್ರತಿವಾದಿ 1, 4, 5 ಮತ್ತು 6 ರವರು. ಹಣಮಪ್ಪ ತಂದೆ ಗಿರಿಯಪ್ಪನ ಕಣಬೂರ ಇವರು ದಿಃ 07.02.1992 ರಲ್ಲಿ ಮೃತ ಪಟ್ಟಿರುವರು ಎಂದರೆ ಸರಿ. ಇತ ಮೃತ ಪಟ್ಟ ನಂತರ ಪ್ರತಿವಾದಿ 1, 4 , 5 ಮತ್ತು 6 ರವರ ಇತನ ವಾರಸುದಾರರು ಆಗಿರುವರು ಎಂದರೆ ಸರಿ . ಮೂಲ ಪುರುಷನ ಆಸ್ತಿ ಒಟ್ಟು 5 ಎಕರೆ ಜಮೀನು ಇರುವುದು. ಇವರು ಸುಮಾರು 10-15 ವರ್ಷಗಳ ಹಿಂದೆ ವಾಟ್ನಿ ಮಾಡಿಕೊಂಡಿರುವರು.

2. ದಿಃ 28.01.1993 ರಲ್ಲಿ ವಾಟ್ನಿ ಮಾಡಿಕೊಂಡಿರುವರು ಎಂದರೆ ಅದರ ಬಗ್ಗೆ ತನಗೆ ಮಾಹಿತಿ ಇರುವುದಿಲ್ಲ ಎಂದು ಸಾಕ್ಷಿ ಉತ್ತರಿಸುವರು. ಹಣಮಪ್ಪ ತಂದೆ ಗಿರಿಯಪ್ಪನ ಕಣಬೂರ ಮೃತ ಪಟ್ಟ ನಂತರ ವಾರಸಾನಾತಿಯಿಂದ ಡ ನಂಬರ್ 832 ಆಗಿರುವುದು ಎಂದರೆ ಸರಿ. ಪ್ರತಿವಾದಿ 1 ತನ್ನ ಹೆಸರಿನಲ್ಲಿ ಮಾಡಿಕೊಂಡ ನಂತರ ನಮಗೆ ಹಕ್ಕು ಬದಲಾವಣೆ ಮಾಡಿರುವರು. ಈ ಅಣ್ಣ ತಮ್ಮಂದಿರು ವಾಟ್ನಿ ಮಾಡಿಕೊಂಡ ಬಗ್ಗೆ ಡ ನಂಬರ್ ಮಂಜೂರು ಆಗಿರುವುದು ಎಂದರೆ ಸರಿ. ಪ್ರತಿವಾದಿ 1 ಏನ ಹೆಸರಿನಲ್ಲಿ ಯಾವಾಗ ಡ ನಂಬರ್ ಮಂಜೂರು ಆದ ಬಗ್ಗೆ ನನಗೆ ಹೇಳಲು ಬರುವುದಿಲ್ಲ, ಏಕೆಂದರೆ ನಾನು ಶಾಲೆ ಕಲಿತಿರುವುದಿಲ್ಲ.

3. ವಾದಿಯರು ಯಾರು ಎಂಬುದರ ಬಗಗೆ ನನಗೆ ಗೊತ್ತಿರುವುದಿಲ್ಲ, ಅವರು ನಮಗೆ ಈ ದಾವೆ ದಾಖಲು ಮಾಡುವ ಪೂರ್ವದಲ್ಲಿ ನಮಗೆ ಏನು ಹೇಳಿರುವುದಿಲ್ಲ, ಈ ದಾವೆ ದಾಖಲು

ಮಾಡಿದ ಬಗ್ಗೆ ವಾದಿಯ ಬಗ್ಗೆ ನಮಗೆ ಗೊತ್ತಾಗಿರುವುದು. 4 ಜನ ಕೂಡಿಕೊಂಡು ಒಟ್ಟು ಎಷ್ಟು ಜನರ ವಿರುದ್ದ ದಾಖಲು ಮಾಡಿರುವರು ಎಂದು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಈ ದಾವೆ ಯಾವ ಪರಿಹಾರ ಕೋರಿ ದಾಖಲು ಮಾಡಿರುವರು ಎಂದು ಸಹ ನನಗೆ ಗೊತ್ತಿರುವುದಿಲ್ಲ.

4. ನಾನು ಜನ್ಮ ತಾಳಿ ಈಗ 58 ವರ್ಷಗಳು ಆಗಿರುವವು. ನಾನು ಶಾಲೆ ಕಲಿತಿರುವುದಿಲ್ಲ. ನನ್ನ ವಯಸ್ಸಿನ ಬಗ್ಗೆ ದಾಖಲಾತಿ ಇರುವುದಿಲ್ಲ, ಆದರೆ ನನಗೆ ಗೊತ್ತಿರುವ ಪ್ರಕಾರ ನನ್ನ ವಯಸ್ಸನ್ನು ಹೇಳಿರುವೆನು. ಈ ದಾವೆಯಲ್ಲಿ ಯಾರು ಯಾರು ಲಿಖಿತ ಪತ್ರ ಸಲ್ಲಿಸಿರುವರು ಎಂದು ನನಗೆ ಗೊತ್ತಿರುವುದಿಲ್ಲ. ನಾನು, ಪ್ರತಿವಾದಿ 3 ರವರು ಮತ್ತು ನನ್ನ ಅಳಿಯ ಸಂಗಪ್ಪ ಕೂಡಿಕೊಂಡು ನಮ್ಮ ವಕೀಲರಿಗೆ ಮಾಹಿತಿ ನೀಡಿರುವೆವು. ಲಿಖಿತ ಪತ್ರದಲ್ಲಿ ಬರೆಸಿರುವ ಸಂಗತಿಗಳು ನನಗೆ ಗೊತ್ತಿರುವುದು. ಆದ ಘಟನೆಯ ಬಗ್ಗೆ ಹೇಳಿ ಬರೆಸಿರುವೆವು. ಗಿರಿಯಪ್ಪನ ವಿವಾಹ ಆತನ ಹೆಂಡತಿ ವಾದಿ 4 ರವರ ಜೊತೆ ಆಗಿರುವುದು ಎಂದರೆ ಸರಿಯಲ್ಲ. ನಾನು ಒಬ್ಬಳೇ ಆತನ ಹೆಂಡತಿಯ ಆಗಿರುವೆನು. 2021 ರಲ್ಲಿ ನನಗೆ 53 ವರ್ಷಗಳು ಎಂದರೆ ಸರಿಯಲ್ಲ. 2021 ರಲ್ಲಿ ಪ್ರತಿವಾದಿ 3 ರವರಿಗೆ 31 ವರ್ಷಗಳು ಆಗಿದ್ದವು.

5. ದಾವಾ ಆಸ್ತಿಗಳ ಸರ್ವೇ ನಂಬರ್ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಯು 1 ಎಕರೆ 30 ಗುಂಟೆ ವಿಸ್ತೀರ್ಣದ ಜಮೀನು ಮಾತ್ರ ಇರುವುದು. ಮನೆಯ ಆಸ್ತಿಯ ನಂಬರ್ 56 ಇರುವುದು. ಪ್ರತಿವಾದಿ 1 ವಮತ್ತು ವಾದಿ 4 ರವರ ಮಧ್ಯೆ ವೈವಾಹಿಕ ಜೀವನದಿಂದ ಮೃತ ಹೊಳೆಪ್ಪ ಮತ್ತು ವಾದಿ 1 ರವರು ಜನ್ಮ ತಾಳಿರುವರು ಎಂದರೆ ಸಾಕ್ಷಿಯು ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಮೃತ ಹೊಳೆಪ್ಪ ದಿಃ 01.06.1981 ರಲ್ಲಿ ಜನ್ಮ ತಾಳಿರುವನು ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು. ವಾದಿ 1 ರವರು ದಿಃ 10.07.1985 ರಲ್ಲಿ ಜನ್ಮ ತಾಳಿರುವಳು ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು. ಪ್ರತಿವಾದಿ 1 ರವರು ಊರು ಬುದ್ನಿಕೇಡಿ ಗ್ರಾಮ ಎಂದರೆ ಸರಿ. ಮೃತ ಹೊಳೆಪ್ಪ ಇತ ಬುದ್ನಿಕೇಡಿ ಸರಕಾರಿ ಶಾಲೆಯಲ್ಲಿ ಶಾಲೆ ಕಲಿತಿರುವನು ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು. ವಾದಿ 1 ರವರು ಬುದ್ನಿಕೇಡಿ ಗ್ರಾಮದಿಂದ

2 ಕಿ.ಮೀ ದೂರದಲ್ಲಿ ಇರುವ ಬಿದರಿ ಗ್ರಾಮದಲ್ಲಿ ಶಾಲೆ ಕಲಿತಿರುವನು ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು. ಹೊಳೆಪ್ಪ ದಿಃ 15.04.2021 ರಂದು ಮೃತ ಪಟ್ಟಿರುವನು ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು. ಇತನಿಗೆ ವಾದಿ 2 ಹೆಂಡತಿ , ವಾದಿ 3 ಮಗಳು ಇರುವಳು ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು. ವಾದಿ 2 ರವರು ಮೂಕಿ ಇದ್ದು ಮಾತನಾಡಲು ಬರುವುದಿಲ್ಲ ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು.

6. ದಾವಾ ಆಸ್ತಿಗಳು ಪ್ರತಿವಾದಿ 1 ಮತ್ತು ವಾದಿಯರ ಕಬ್ಜೆಯಲ್ಲಿ ಇರುವವು ಎಂದರೆ ಸರಿಯಲ್ಲ, ಅವು ತಮ್ಮ ಕಬ್ಜೆ ಇರುವವು ಎಂದು ಸಾಕ್ಷಿ ಉತ್ತರಿಸುವರು. ನನ್ನ ಗಂಡ ಪ್ರತಿವಾದಿ 1 ರವರು ನನಗೆ 10-12 ವರ್ಷಗಳ ಹಿಂದೆ ಆಸ್ತಿಗಳನ್ನು ಬಿಟ್ಟಕೊಟ್ಟಿದ್ದು , ನಾನು ಕಳೆದ 4 ವರ್ಷಗಳ ಹಿಂದೆ ಪ್ರತಿವಾದಿ 2 ರವರಿಗೆ ಹಕ್ಕು ಬಿಟ್ಟುಕೊಟ್ಟಿರುವೆನು.

7. ಯಾದವಾಡ ಗ್ರಾಮದ ಹುಲಕುಂದ ಎಂಬ ಮನೆತನವನು ನನಗೆ ಸಂಬಂಧಿಯಾಬೇಕು ಎಂದರೆ ಸರಿಯಲ್ಲ. ಹುಲಕುಂದ ಕುಟುಂಬದವರು ಬುದ್ನಿಕೇರಿ ಗ್ರಾಮದಲ್ಲಿ ರಂಗನಗೌಡ ನ್ಯಾಮಗೌಡ ಅಲಿಯಾಸ್ ಪಾಟೀಲ್ ಇವರ ಜಮೀನುಗಳನ್ನು ಲಾವಣಿ ಮೇರೆಗೆ ಸಾಗುವಳಿ ಮಾಡುತ್ತಿದ್ದರು ಎದಂರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು. ನನ್ನ ತವರು ಮನೆ ಕಳ್ಳಿಗುದ್ದಿ ಗ್ರಾಮ. ಯಾದವಾಡದಿಂದ ಕಳ್ಳಿಗುದ್ದಿ ಗ್ರಾಮ ಎಷ್ಟು ಅಂತರದಲ್ಲಿ ಇರುವುದು ನನಗೆ ಗೊತ್ತಿರುವುದಿಲ್ಲ. ಹುಲಕುಂದ ಅವರು ನನಗೆ ಸಂಬಂಧಿಗಳು ಆಗಿರುವುದರಿಂದ ನಾನು ರಂಗನಗೌಡ ನ್ಯಾಮಗೌಡ ಇವರ ಜಮೀನಿನಲ್ಲಿ ಬಂದು ವಾಸಿಸುಲು ಪ್ರಾರಂಭಿಸಿದೆನು ಎಂದರೆ ಸರಿಯಲ್ಲ. ಆಗ ನನ್ನ ಮತ್ತು ಗಿರಿಯಪ್ಪನ ಮಧ್ಯೆ ಅನೈತಿಕ ಸಂಬಂದ ಬೆಳೆದಿರುವುದು ಎಂದರೆ ಸರಿಯಲ್ಲ, ನಾನು ಗಿರಿಯಪ್ಪನ ಜೊತೆ ವಿವಾಹ ಮಾಡಿಕೊಂಡಿರುವೆನು ಎಂದು ಸಾಕ್ಷಿ ಉತ್ತರಿಸುವರು. ಗಿರಿಯಪ್ಪ ಮತ್ತು ಕಮಲವ್ವನ ನಡುವೆ ವಿವಾಹವಾದ ನಂತರ ಇಬ್ಬರು ಮಕ್ಕಳು ಜನ್ಮ ತಾಳಿದ ನಂತರ ಗಿರಿಯಪ್ಪ ನನ್ನ ಜೊತೆ ಅನೈತಿಕ ಸಂಬಂಧ ಬೆಳೆಸಿರುವೆನು ಎಂದರೆ ಸರಿಯಲ್ಲ. ಗಿರಿಯಪ್ಪ ನನ್ನ ಜೊತೆ ಅನೈತಿಕ ಸಂಬಂಧ ಹೊಂದಿರುದರಿಂದ ವಾದಿ 4 ರವರಿಗೆ ತೊಂದರೆ ನೀಡಿ ಮನೆಯಿಂದ ಹೊರಗೆ

ಹಾಕಲು ಪ್ರಾರಂಬಿಸಿರುವನು ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು. ಗಿರಿಯಪ್ಪ ನನ್ನ ಜೊತೆ ಅನೈತಿಕ ಸಂಬಂಧ ಹೊಂದಿರುವದರ ಪರಿಣಾಮದಿಂದ ಆತ ದುಶ್ಚಟಗಳಿಗೆ ದಾಸನಾಗಿದ್ದ ಎಂದರೆ ಸರಿಯಲ್ಲ. ಗಿರಿಯಪ್ಪ ಮದ್ಯ ಸೇವೆನೆ ಮಾಡಿ ಅಮಲಿನಲ್ಲಿ ಇದ್ದಾಗ ಆತನಿಗೆ ದುಂಬಾಳ ಬಿದ್ದು 1 ಎಕರೆ ಜಮೀನನ್ನು ನನ್ನ ಹೆಸರಿನಲ್ಲಿ ಖೊಟ್ಟಿಯಾಗಿ ಹಕ್ಕು ಬದಲಾವಣೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

8. ದಿಃ 18.04.2019 ರಂದು ಗಿರಿಯಪ್ಪ ಮದ್ಯದ ಅಮಲಿನಲ್ಲಿ ಇದ್ದಾಗ ಆತನ ಕಡೆಯಿಂದ ಒಂದು ನೊಂದಾಯಿತವಲ್ಲದ ವೈಯಕ್ತಿಕ ಪತ್ರವನ್ನು ಖೊಟ್ಟಿಯಾಗಿ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಈ ಖೊಟ್ಟಿ ದಾಖಲೆ ಬರೆಸಿಕೊಂಡ ನಂತರ ಸರ್ವೇ ನಂಬರ್ 44/1 ವಿಸ್ತೀರ್ಣ 1 ಎಕರೆ ಹಾಗೂ 44/4 ವಿಸ್ತೀರ್ಣ 30 ಗುಂಟೆ ಅಂತ ಎಂಆರ್ ನಂ. ಹೆಚ್ 14/2018-19 ರ ಪ್ರಕಾರ ಹಕ್ಕು ಬದಲಾವಣೆ ಆಗಿದೆ ಎಂದರೆ ಸಾಕ್ಷಿ ನುಡಿಯುವುದೇನೆಂದರೆ ಗಿರಿಯಪ್ಪ ತನ್ನ ಹೆಸರಿನಲ್ಲಿ ಮಾಡಿರುವುದಾಗಿ ಎಂದು ಉತ್ತರಿಸುವರು. ಬುದ್ನಿಕೇರಿ ಗ್ರಾಮ ಕೃಷ್ಣ ಯೋಜನೆಯಲ್ಲಿ ಮುಳುಗಡೆ ಆಗಿದೆ ಎಂದರೆ ಸರಿ. ಗಿರಿಯಪ್ಪ ಮದ್ಯದ ಅಮಲಿನಲ್ಲಿ ಇದ್ದಾಗ ದಾವಾ ಆಸ್ತಿ ಸರ್ವೇ ನಂಬರ್ 44/4 ನ್ನು ಪ್ರತಿವಾದಿ 3 ರವರ ಹೆಸರಿನಲ್ಲಿ ಮತ್ತು ಸರ್ವೇ ನಂಬರ್ 44/1 ರ ಜಮೀನನ್ನು ನಾನು ಪ್ರತಿವಾದಿ 3 ರವರ ಹೆಸರಿನಲ್ಲಿ ಖೊಟ್ಟಿಯಾದ ನೊಂದಾಯಿತ ದಾನ ಪತ್ರವನ್ನು ದಿಃ 05.07.2021 ರಲ್ಲಿ ಮಾಡಿಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿ 1 ರವರಿಗೆ ಸ್ವಇಚ್ಛೆ ಯಿಂದ ದಾನ ಪತ್ರ ಮಾಡಿಕೊಟ್ಟಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ಪ್ರತಿವಾದಿ 1 ರವರಿಗೆ ಸರ್ವೇ ನಂಬರ್ 44/1 ವಿಸ್ತೀರ್ಣ 1 ಎಕರೆ ಜಮೀನನ್ನು ನನಗೆ ಬಿಟ್ಟು ಕೊಡುವ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನನಗೂ ಮತ್ತು ಗಿರಿಯಪ್ಪನಿಗೂ 1 ಎಕರೆ 30 ಗುಂಟೆ ಜಮೀನನ್ನು ಪ್ರತಿವಾದಿ 3 ರವರಿಗೆ ಬಕ್ಷಿಸ್ ಪತ್ರ ಮಾಡಿಕೊಡುವ ಮಾಲಕಿ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

9. ಪ್ರತಿವಾದಿ 3 ವಿನ ಗಂಡ ತಾನು ತಕರಾರು ಸಲ್ಲಿಸಿ ಈ ಆಸ್ತಿಯನ್ನು ಎತ್ತಿಹಾಕುವ ಸಲುವಾಗಿ ಮತ್ತು ಪರಿಹಾರ ತಾನು ಒಬ್ಬನೇ ಪಡೆಯುವ ಸಲುವಾಗಿ ನನಗೆ ಈ ರೀತಿಯಾಗಿ

ಹೇಳುವಂತೆ ಹೇಳಿರುವನು ಎಂದರೆ ಸರಿಯಲ್ಲ. ವಾದಿ 4 ರವರು ರೆಡ್ಡಿ ಸಂಪ್ರದಾಯ ಪ್ರಕಾರ ಪ್ರತಿವಾದಿ 1 ವಿನ ಜೊತೆ ಮದುವೆ ಮಾಡಿಕೊಂಡಿರುವಳು ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು. ಪ್ರತಿವಾದಿ 1 ರವರ ಜೊತೆ ನಾನು ಒಬ್ಬಳೇ ಮಾಡಿಕೊಂಡಿರುವೆನು. ಪ್ರತಿವಾದಿ 1 ಮತ್ತು ವಾದಿ 4 ರವರು ವಿವಾಹದ ಸಮಯದಲ್ಲಿ ರೆಡ್ಡಿ ಸಂಪ್ರದಾಯ ಪ್ರಕಾರ ಕಂಬಳಿ ಹಾಸುವುದು, ಶಾಶಕ್ಕಿ ಹಾಕುದು, ಆರತಿ ಹಿಡಿಯುದು, ಬಾಸಿಂಗ ಕಟ್ಟಿಸುವುದು ಮತ್ತು ಮದುವೆ ಮಾಡಿಸುವ ಸ್ವಾಮಿಗಳ ಸಮಕ್ಷಮದಲ್ಲಿ ತಾಳಿ ಕಟ್ಟುವ ಸಂಪ್ರದಾಯ ನೇರವೇರಿಸಿ , ಬುದ್ನಿಕೇರಿ ಗ್ರಾಮದಲ್ಲಿ ಈ ವಿವಾಹ ಆಗಿದೆ ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು. ಇವರು ವಿವಾಹ ಮಾಡಿಕೊಂಡ ಸಂಗತಿ ಗೊತ್ತಿದ್ದರೂ ಸಹಿತ ನಾನು ಪ್ರತಿವಾದಿ 1 ವಿನ ಜೊತೆ ಅನೈತಿಕ ಸಂಬಂಧ ಹೊಂದಿ ಆತ ನನ್ನ ಜೊತೆ ಮದುವೆಯಾಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ

VIJAYAKUMAR KANNUR

Digitally signed by VIJAYAKUMAR KANNUR
Date: 2025.07.19 10:33:53 +0530